ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 81-85
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಧರ್ಮ ಸಮನ್ವಯತೆ

**ಡಾ. ಕವಿತ ಬಿ. ಎನ್**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ

***Abstract:***
*ಪ್ರಾಚೀನ ಕನ್ನಡ ಕಾವ್ಯಗಳು ಕನ್ನಡ ನಾಡಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಮಹತ್ವದ ಸಾಹಿತ್ಯ ಸಂಪತ್ತಾಗಿವೆ. ಜೈನ, ಬೌದ್ಧ, ಶೈವ, ವೈಷ್ಣವ ಹಾಗೂ ಇತರ ಧಾರ್ಮಿಕ ಪರಂಪರೆಗಳ ಪ್ರಭಾವವು ಕನ್ನಡ ಕಾವ್ಯಗಳ ವಿಷಯವಸ್ತು ಮತ್ತು ಆಶಯಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಕಾವ್ಯಗಳಲ್ಲಿ ವಿವಿಧ ಧರ್ಮಗಳ ತತ್ತ್ವ, ನೀತಿ, ಮಾನವೀಯ ಮೌಲ್ಯಗಳು ಮತ್ತು ಸಹಬಾಳ್ವೆಯ ಸಂದೇಶಗಳು ಸಮನ್ವಯಗೊಂಡಿರುವುದನ್ನು ಕಾಣಬಹುದು. ಧಾರ್ಮಿಕ ಭಿನ್ನತೆಗಳ ನಡುವೆಯೂ ಸತ್ಯ, ಅಹಿಂಸೆ, ದಯೆ, ಕರುಣೆ, ಧರ್ಮನಿಷ್ಠೆ ಮತ್ತು ಮಾನವೀಯತೆಯಂತಹ ಸಾರ್ವತ್ರಿಕ ಮೌಲ್ಯಗಳಿಗೆ ಕವಿಗಳು ಹೆಚ್ಚಿನ ಮಹತ್ವ ನೀಡಿದ್ದಾರೆ. ಆದ್ದರಿಂದ ಪ್ರಾಚೀನ ಕನ್ನಡ ಕಾವ್ಯಗಳು ಧಾರ್ಮಿಕ ಸಹಿಷ್ಣುತೆ, ಪರಸ್ಪರ ಗೌರವ ಮತ್ತು ಸಾಮಾಜಿಕ ಸಾಮರಸ್ಯವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಈ ಅಧ್ಯಯನವು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ವ್ಯಕ್ತವಾಗಿರುವ ಧರ್ಮ ಸಮನ್ವಯತೆಯ ಸ್ವರೂಪ, ಆಶಯ ಮತ್ತು ಸಾಮಾಜಿಕ–ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ.*

***Keywords:*** *ಪ್ರಾಚೀನ ಕನ್ನಡ ಕಾವ್ಯ, ಧರ್ಮ ಸಮನ್ವಯತೆ, ಜೈನ ಧರ್ಮ, ಶೈವ–ವೈಷ್ಣವ ಪರಂಪರೆ, ಧಾರ್ಮಿಕ ಸಹಿಷ್ಣುತೆ*

**ಪೀಠಿಕೆ**

ಸಾಹಿತ್ಯವು ಮನುಷ್ಯನನ್ನು ಸಮಾಜಮುಖಿ ಗೊಳಿಸುವ ಅದ್ಭುತ ಮಾಧ್ಯಮವೆಂದರೆ ತಪ್ಪಾಗಲಾರದು. ಈ ನಿಟ್ಟಿನಲ್ಲಿ ಸಾಹಿತ್ಯ ಸಮಾಜಕ್ಕೆ ವಿಶಿಷ್ಟ ಕೊಡುಗೆಯನ್ನು ಪ್ರಾಚೀನ ಕಾಲದಿಂದಲೂ ನೀಡುತ್ತಲೇ ಬಂದಿದೆ. ಇಂದು ಮಾನವನ ಮನಸ್ಸನ್ನು ಹದಗೊಳಿಸಬೇಕಾದ ತುರ್ತು ಖಂಡಿತವಾಗಿಯೂ ಇದೆ; ಕಾರಣ ಇಂದಿನ ಸಮಾಜದಲ್ಲಿನ ಧರ್ಮಗಳ ಬಗೆಗೆ ಇರುವ ಕಣ್ಕಟ್ಟುಗಳನ್ನು ಗಮನಿಸಿದರೆ ಧರ್ಮ ಸಮನ್ವಯತೆ ಸಾಧಿಸುವುದು ವರ್ತಮಾನದ ತುರ್ತು ಎಂದೇ ಭಾವಿಸಬೇಕು. ಹಿರಿಯರ ನೆರಳಿನಲ್ಲಿ ಕಿರಿಯರು ಬೆಳೆಯಬೇಕು" ಎಂಬ ನಾಣ್ನುಡಿಯಂತೆ ಪ್ರಾಚೀನ ಕಾಲದ ಆಗಾಧ ಚಿಂತನೆ, ಸಹಿಷ್ಣುತೆ, ಸಹಬಾಳ್ವೆ, ಸಹಕಾರ ಮನೋಧರ್ಮಗಳು ಜಾಗತೀಕರಣದ ಪ್ರಭಾವದಿಂದ ನಲುಗಿದೇ ಎಂದೇ ಹೇಳಬಹುದು. ಮನುಷ್ಯ ಭಾವಗಳು ಕಾಲಗರ್ಭದ ಪಾತಾಳದಲ್ಲಿ ಸಿಕ್ಕಿ ಅಸಹಿಷ್ಣುತೆ, ಅಸಹಕಾರ ಇಂಥ ಅನೇಕ ಸ್ವಭಾವಗಳಲ್ಲಿ ಮುಳುಗಿ ನಿಜತ್ವವನ್ನು ಮರೆತಂತಿದೆ. ಹಾಗಾಗಿ ಮತ್ತೊಮ್ಮೆ ಹಿಂದಿನ ಚರಿತ್ರೆಯನ್ನು ಅರಿಯುವ ಮೂಲಕ ಮನುಷ್ಯ ಮೌಲ್ಯಗಳನ್ನು ಕಾಪಾಡಿಕೊಳ್ಳುವ ಅಗತ್ಯತೆ ಇದೆ. ಆ

***Please cite this article as:*** ಕವಿತ, ಬಿ.ಎನ್. (2026). ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಧರ್ಮ ಸಮನ್ವಯತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 81–85

ನೆಲೆಯಲ್ಲಿ ಧರ್ಮ ಸಮನ್ವಯತೆಯೂ ಒಂದು. ಇಂಥ ಧರ್ಮ ಸಮನ್ವಯ ಭಾವವನ್ನು ಸಾಹಿತ್ಯದ ಮೂಲಕ ತುಂಬುವ ಪ್ರಯತ್ನ ನಡೆದದ್ದು ಪ್ರಾಚೀನ ಕನ್ನಡ ಕವಿಗಳ ಶ್ರೇಷ್ಠತೆ. ಅದು ಕಾವ್ಯದ ಮೂಲಕ ಒಡಮೂಡಿದ್ದು ಕನ್ನಡ ಕಾವ್ಯಗಳು ಸಾಹಿತ್ಯದ ಸೌಷ್ಠವತೆಯನ್ನು ಮತ್ತಷ್ಟು ಅಧಿಕಗೊಳಿಸಿತು ಎಂಬುದನ್ನು ಮರೆಯುವಂತಿಲ್ಲ.

ಕನ್ನಡ ನಾಡು ಸರ್ವಧರ್ಮ ಸಮನ್ವಯ ನಾಡು ಎಂಬುದರಲ್ಲಿ ಸಂಶಯವಿಲ್ಲ. ಅದಕ್ಕೆ ಚರಿತ್ರೆಯೇ ಸಾಕ್ಷಿಭೂತವಾಗಿ ನಿಂತಿದೆ. ಪ್ರಾಚೀನ ಕಾಲದಲ್ಲಿ ಆಳ್ವಿಕೆ ಮಾಡಿದ ಅನೇಕ ರಾಜವಂಶಗಳನ್ನು ಹಾಗೂ ಅವರು ಪ್ರೋತ್ಸಾಹಿಸಿದ ಕವಿಗಳನ್ನು ಮತ್ತು ಕಾವ್ಯ ಪರಂಪರೆಯನ್ನು ಗಮನಿಸಿದರೆ ಅವರ ಸೌಹಾರ್ದ ಮನೋಧರ್ಮ ಅರಿವಾಗುತ್ತದೆ. ಅಲ್ಲದೇ ರಾಜರಷ್ಟೇ ಅಲ್ಲದೇ ಕವಿಗಳು ಕೂಡ ತಮ್ಮ ಕಾವ್ಯಗಳ ಮೂಲಕ ಲೋಕ ಕಲ್ಯಾಣವನ್ನು ಬಯಸಿದದ್ದು ಹಾಗೂ ಒಳಿತು ಕೆಡುಕುಗಳ ಆಳಗಳನ್ನು ತಿಳಿಸಿದದ್ದು ಅದರ ಒಂದು ಭಾಗವಾಗಿ ಧರ್ಮದ ನೆಲೆಯನ್ನು ಸೌಹಾರ್ದತೆಯಿಂದ ಕಟ್ಟಿಕೊಟ್ಟದ್ದು ಕವಿಗಳ ಮತ್ತು ಕಾವ್ಯದ ಔಚಿತ್ಯವನ್ನು ಹೆಚ್ಚಿಸಿತು.

ಬೌದ್ಧ, ಜೈನ, ಅನ್ಯಧರ್ಮಿಯರು ಕರ್ನಾಟಕಕ್ಕೆ ಆಗಮಿಸಿ, ನೆಲೆಸಿದ್ದಕ್ಕೆ ಆಧಾರಗಳು ಶಾಸನಗಳು, ತಾಮ್ರಪಟಗಳು. ಆ ಮೂಲಕ ಕರ್ನಾಟಕದ ರಾಜಮನೆತನಗಳ ಆಳ್ವಿಕೆಗೂ, ಅವರ ಆಶ್ರಯದಲ್ಲಿದ್ದ ಕವಿಗಳಿಗೂ, ಆ ಕವಿಗಳಿಂದ ರಚಿತವಾದ ಕೃತಿಗಳಿಗೂ ಒಂದು ಅವಿನಾಭಾವ ಸಂಬಂಧವಿದೆ. ಆ ಕಾವ್ಯ ಸಂಬಂಧವೇ ಈ ಧರ್ಮ ಸಮನ್ವಯತೆಯನ್ನು ಎತ್ತಿಹಿಡಿದಿದೆ. ಶಾಸನ ಸಾಹಿತ್ಯದಲ್ಲಿಯೂ ಈ ಸಂಬಂಧವಾಗಿ ವಿಚಾರಗಳು ಅಭಿವ್ಯಕ್ತವಾಗಿರುವ ದಾಖಲೆಯನ್ನು ಗಮನಿಸಬಹುದು.

ಶಾಸನವು ಧರ್ಮಾರ್ಥ ಕಾರ್ಯಗಳಲ್ಲಿ ಬಹುಮುಖ್ಯ ಪಾತ್ರ ವಹಿಸಿದಂತೆ ಧರ್ಮ ಸಮನ್ವಯತೆಯ ವಿಷಯದಲ್ಲಿಯೂ ಪ್ರಮುಖವಾದದ್ದು. ವಿಜಯನಗರ ಕಾಲದ ಶಾಸನವು ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಕಲ್ಲಿನ ಮೇಲೆ ಕೆತ್ತಲ್ಪಟ್ಟಿದೆ. ಈ ಶಾಸನ ಧರ್ಮ ಸಮನ್ವಯತೆಯ ಸಾಕ್ಷಿಯಾಗಿದೆ. ವಿಜಯನಗರದ ದೊರೆಯಾಗಿದ್ದ ಬುಕ್ಕರಾಯನ ಆಳ್ವಿಕೆಯ ಕಾಲದಲ್ಲಿ ಜೈನರಿಗೂ ವೈಷ್ಣವರಿಗೂ ವೈಮನಸ್ಸು ಉಂಟಾಗಿ ಕಲಹವಾಗಲು ಅಶಾಂತಿಯು ತಲೆದೋರಿ ತೊಂದರೆ ಎದುರಾದಾಗ ಸ್ವತಃ ಬುಕ್ಕರಾಯನೇ ಈ ಎರಡೂ ಧರ್ಮಗಳ ಮುಖಂಡರಿಗೆ ಬರಹೇಳಿ ಪ್ರಮುಖರೆಲ್ಲರ ಸಮ್ಮುಖದಲ್ಲಿ "ವೈಷ್ಣವರೂ ಜೈನರೂ ಒಂದು, ಭೇದವಾಗಿ ಕಾಣಲಾಗದು" ಎಂದು ತಿಳಿ ಹೇಳಿ ಸಮಾಧಾನಪಡಿಸಿ, ಆ ಎರಡು ಧರ್ಮಗಳ ಮುಖಂಡರ ಕೈ ಕೈ ಹಿಡಿಸಿ ಸ್ನೇಹವನ್ನುಂಟು ಮಾಡಿದ ಬಗೆಯು ಗದ್ಯ ರೂಪದ ಶಾಸನದಲ್ಲಿ ವರ್ಣಿಸಲಾಗಿರುವುದು ದಾಖಲಾಗಿದೆ. ಹಾಗೆಯೇ ಹೊಯ್ಸಳರ ಕಾಲಕ್ಕೆ ಸೇರಿದ ಬೇಲೂರಿನ ಶಾಸನವೊಂದರಲ್ಲಿ ಎಲ್ಲಾ ದೇವರೂ ಒಬ್ಬನೇ ಅವನನ್ನು ಭಿನ್ನ ಭಿನ್ನ ನಾಮಗಳಿಂದ ಪೂಜಿಸುತ್ತಾರೆಂಬ ತತ್ವದ ಶಾಸನ ಶ್ಲೋಕರೂಪದಲ್ಲಿದೆ.

***"ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ***

***ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯ್ಯಾಯಿಕಾII***

***ಅರ್ಹನ್ನಿತ್ಯಥ ಜೈನಶಾಸನ ರತಾಃ ಕರ್ಮೇತಿ ಮೀಮಾಂಸಕಾಃ***

***ಸೋಯಂವೋವಿದಧಾತು ವಾಂಛಿತ ಫಲಂ ಶ್ರೀ ಕೇಶವಸ್ಸದಾII"***

ಕನ್ನಡ ನಾಡು ಸರ್ವ ಧರ್ಮಗಳ ತಾಯ್ನೆಲವಾಗಿ ಸಮಾನ ಗೌರವವನ್ನು ನೀಡುತ್ತಿತ್ತು ಎಂಬ ಭಾವ ಈ ಶ್ಲೋಕದಲ್ಲಿ ಅಭಿವ್ಯಕ್ತವಾಗಿದೆ. ಶೈವರು ಶಿವನೆಂದೂ, ವೇದಾಂತಿಗಳು ಬ್ರಹ್ಮನೆಂದೂ, ಬೌದ್ಧರು ಬುದ್ಧನೆಂದು, ನೈಯ್ಯಾಮಿಕರು ಕರ್ಮನೆಂದು, ಜೈನರೂ ಅರ್ಹನ್ ಎಂದೂ, ಮೀಮಾಂಸಕರು ಕರ್ಮರೆಂದೂ ಮುಂತಾಗಿ

ಹೇಳುವ ಆ ಕೇಶವನು ನಮ್ಮ ಇಷ್ಟಾರ್ಥಗಳನ್ನು ಪೂರೈಸಲಿ ಎನ್ನುವ ಅಭಿಪ್ರಾಯವು ಧರ್ಮಸಮನ್ವಯತೆಯನ್ನು ಪ್ರತಿಪಾದಿಸುವ ಅದ್ಭುತ ಸಾಲುಗಳಾಗಿವೆ. ಇಂಥ ಅನೇಕ ಶಾಸನ, ಕನ್ನಡ ಕಾವ್ಯಗಳ ರಚನೆ ಲೋಕದ ಸ್ವಾಸ್ಥ್ಯತೆಗೆ ಅತ್ಯಂತ ಪ್ರಮುಖವಾದದ್ದು ಎಂಬುದು ಗಮನಾರ್ಹ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊಟ್ಟಮೊದಲ ಉಪಲಬ್ಧ ಲಕ್ಷಣ ಗ್ರಂಥವಾಗಿರುವ 'ಕವಿರಾಜಮಾರ್ಗ' ಈ ನೆಲೆಯಲ್ಲಿ ಮಹತ್ವಪೂರ್ಣವಾದದ್ದು. ಕೃತಿಕಾರನಾದ ಶ್ರೀವಿಜಯ, ನೃಪತುಂಗ ರಾಜನ ಆಶ್ರಯದಲ್ಲಿದ್ದನೆಂಬುದು ಒಪ್ಪಿತವಾದ ಸಂಗತಿ. 'ಕವಿರಾಜಮಾರ್ಗ' ಕೃತಿಯ ಆರಂಭಿಕ ಪದ್ಯಗಳಲ್ಲಿ ವಿಷ್ಣುವಿನ ಸ್ತುತಿ ಇದೆ. ಈ ಸ್ತುತಿ ಪದ್ಯದಲ್ಲಿ ನೃಪತುಂಗನ ಆಶ್ರಿತ ಕವಿಯಾಗಿರುವ ಶ್ರೀವಿಜಯನು ಆಶ್ರಯದಾತನಾದ ತನ್ನ ದೊರೆಗೂ, ದೊರೆಯ ಬಿರುದಾವಳಿಗೂ ಹಾಗೂ ಇಷ್ಟದೈವಕ್ಕೂ ಅಭೇದವನ್ನು ಕಲ್ಪಿಸಿ ಹಾಡಿ ಹೊಗಳಿರುವುದನ್ನು ಕಾಣಬಹುದು.

***"ಕೃತಕೃತ್ಯಮಲ್ಲನ ಪ್ರತಿ***
***ಹತವಿಕ್ರಮನೊಸೆದು ವೀರನಾರಾಯಣನ***
***ಪ್ಪತಿಶಯಧವಳಂ ನಮಗೀ***
***ಗತರ್ಕಿತೋಪಸ್ಥಿತ ಪ್ರತಾಪೋದಯಮಂ"***

ಇಲ್ಲಿ ಉದಾರಿಯೂ, ನೀತಿನಿರತನಾಗಿರುವ ನೃಪತುಂಗನು, ಕೃತಕೃತ್ಯಮಲ್ಲನು, ಅಪ್ರತಿಹತ ವಿಕ್ರಮನು, ವೀರನಾರಾಯಣನಾದ ಅತಿಶಯಧವಳನು ಸಂತೋಷದಿಂದ ನಮಗೆ ನಿಸ್ಸಂಶಯವಾದ ಸಾಹಸದ ಏಳ್ಗೆಯನ್ನು ಒದಗಿಸಲಿ ಎಂಬ ಪದ್ಯವೇ ಕವಿರಾಜಮಾರ್ಗ ಕೃತಿ ರಚಿತವಾಗುವ ಕಾಲಕ್ಕೆ ನೃಪತುಂಗನು ವೈದಿಕ ಮತಾನುಯಾಯಿ ಆಗಿದ್ದನೆಂಬ ಅಂಶವನ್ನು ಹೊರಹಾಕುತ್ತದೆ. ಅಲ್ಲದೇ ಅವನೇ ಹೊರಡಿಸಿರುವ 'ಸಂಜಾನ ಶಾಸನ' ಇದನ್ನು ಪ್ರಮಾಣೀಕರಿಸುತ್ತದೆ. ನೃಪತುಂಗನ ಪೂರ್ವಜರಾದ ರಾಷ್ಟ್ರಕೂಟ ವಂಶದ ದೊರೆಗಳೆಲ್ಲ ವಿಷ್ಣು–ಲಕ್ಷ್ಮಿ ಪ್ರಿಯರು ಮಾತ್ರವಲ್ಲದೇ ಶಿವನ ಆರಾಧಕರಾಗಿದ್ದವರು.ಇದಕ್ಕೆ ರಾಷ್ಟ್ರಕೂಟ ವಂಶದ ಶಾಸನ ಹಾಗೂ ತಾಮ್ರಪಟಗಳಲ್ಲಿ ಶಿವ ಮತ್ತು ಶಿವ ಸಂಬಂಧ ಲಾಂಛನವೇ ಸಾಕ್ಷಿ.

ಹಾಗಾಗಿ ನೃಪತುಂಗನು ವೈದಿಕನಾಗಿದ್ದರೂ ಪರಮತ ಸಹಿಷ್ಣುವಾಗಿ ಜೈನನಾದ ಶ್ರೀವಿಜಯನಿಗೆ ಆಶ್ರಯದಾತನಾಗಿ ಸಾಹಿತ್ಯ ಪೋಷಕನಾಗಿ ನಿಂತಿದ್ದು ಆತನ ಪರಧರ್ಮದ ಬಗೆಗಿನ ಗೌರವಭಾವವನ್ನು ಸೂಚಿಸುತ್ತದೆ. ಆ ಕಾಲಕ್ಕಾಗಲೇ ಕಾವ್ಯ ಕ್ಷೇತ್ರದಲ್ಲಿ ಮತನಿಷ್ಠೆಯು ಧರ್ಮಗಳ ಸಮನ್ವಯವಾಗಿ ಪರಿವರ್ತಿತವಾದ ನೆಲೆಯನ್ನು ಗ್ರಹಿಸಬಹುದು. ಈ ನೆಲೆಯಲ್ಲಿಯೇ ಕವಿರಾಜಮಾರ್ಗಕಾರ ತನ್ನ ಮೂರನೇ ಪರಿಚ್ಛೇದದ ಪದ್ಯವೊಂದರಲ್ಲಿ

***"ಕಸವರಮೆಂಬುದು ನೆರೆ ಸೈ***
***ರಿಸಲಾರ್ಪೊಡೆ ಪರವಿಚಾರಮಂ***
***ಧರ್ಮಮುಮಂ***
***ಕಸವೇಂ ಕಸವರಮೇನು***
***ಬ್ಬಸಮಂ ಬಸಮಲ್ಲದಿರ್ದು ಮಾಡುವದೆಲ್ಲಂ"***

ಎನ್ನುತ್ತಾ ಇತರರ ವಿಚಾರಗಳನ್ನು, ಧರ್ಮಗಳನ್ನು ತಾಳ್ಮೆಯಿಂದ ಗೌರವಿಸುವುದೇ ನಿಜವಾದ ಸಂಪತ್ತು. ಹಾಗೆ ಮಾಡದಿದ್ದರೆ ಅದು ಕೇವಲ ಮಾನಸಿಕ ಕ್ಲೇಶವನ್ನು, ಉಬ್ಬಸವನ್ನು ತರುತ್ತದೆಂಬ ನಿಜವನ್ನು ಅರ್ಥೈಸುತ್ತಿರುವುದನ್ನು ಸೂಕ್ಷ್ಮವಾಗಿ ಅರಿಯಬೇಕು. ಪರಧರ್ಮಗಳನ್ನು ಸಹಿಷ್ಣುತಾ ಭಾವದಿಂದ ಕಾಣುವುದು, ಗೌರವಿಸುವುದು ನಿಜವಾದ ಧರ್ಮ ಸಮನ್ವಯವೇ ಸರಿ.

ಆದಿಕವಿಯೆನಿಸಿರುವ ಪಂಪನು ಕೂಡ ತನ್ನ ಕಾವ್ಯದಲ್ಲಿ ಧರ್ಮ ಸಮನ್ವಯತೆ ಮೆರೆದಿರುವುದು ದೃಗೋಚರಿಸಲ್ಪಟ್ಟಿದೆ. ಜೈನ ಮತಾವಲಂಬಿಯಾಗಿದ್ದರೂ ಮನೆತನದ ಪರಂಪರೆಯು ಯಾಗ ಯಜ್ಞಾದಿಗಳಲ್ಲಿ ನಿರತರಾಗಿರುತ್ತಿದ್ದ ವೈದಿಕ ಧರ್ಮವಾಗಿತ್ತು ಎಂಬುದು ಪಂಪನ ವಂಶಾವಳಿಯ ಹಿನ್ನೆಲೆಯಲ್ಲಿ ಗಮನಿಸಬಹುದು. ಹಾಗಾಗಿ ಪಂಪನಲ್ಲಿ ಸಹಜವಾಗಿಯೇ ಜೈನ–ವೈದಿಕ ಧರ್ಮಗಳು ಮಿಳಿತಗೊಂಡು ಪರಧರ್ಮವನ್ನು ಅನುಸರಿಸ

ಹೊರಟರೂ ಧರ್ಮಾಂಧತೆಗೆ ಒಳಪಡದೆ ಎರಡೂ ಧರ್ಮಗಳನ್ನು ಮತ್ತು ಸಂಸ್ಕೃತಿಯನ್ನು ಉದಾರವಾಗಿ ಸ್ವೀಕರಿಸಿ, ಸಮನ್ವಯಗೊಳಿಸಿದ ಹೆಗ್ಗಳಿಕೆ ಪಂಪನದು ಹಾಗೂ ಪಂಪನ ಕಾವ್ಯದೆಂಬುದು ಸ್ಪಷ್ಟ.

ಪಂಪ ತನ್ನ ಕೃತಿಗಳಾದ 'ಆದಿಪುರಾಣ'ದಲ್ಲಿ ಜಿನಸ್ತುತಿಯನ್ನು ಮಾಡುವ ಮೂಲಕ ಜೈನಧರ್ಮ ತತ್ವಸಾರವನ್ನು ಸಾರಿದರೆ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ವೈದಿಕ ಧರ್ಮದ ಅನೇಕ ಅಂಶಗಳನ್ನು ಕಟ್ಟಿಕೊಡುವ ಮೂಲಕ ವೈದಿಕ–ಜೈನ ಸಂಸ್ಕಾರಗಳನ್ನು ಅಭಿವ್ಯಕ್ತಿಸುತ್ತಾನೆ. ತನಗೆ ಆಶ್ರಯದಾತನಾದ ಅರಿಕೇಸರಿ ರಾಜನನ್ನು ಕುರಿತು ನಾರಾಯಣನಿಗೆ ಹೋಲಿಸುವ ಮೂಲಕ ಆತನನ್ನು ಸ್ತುತಿಸಿರುವುದು ಧರ್ಮ ಸಮನ್ವಯವನ್ನು ಸಾರುತ್ತದೆ. ಕಾವ್ಯದ ಪ್ರಾರಂಭದ ಸ್ತುತಿ ಪದ್ಯಗಳನ್ನು ಗಮನಿಸಿದರೆ ಈ ಅಂಶವನ್ನು ವಿವೇಚಿಸಬಹುದು.

***"ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ***
***ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ***
***ತ್ಮೀಯ ಸುಪುಷ್ಪವೃಷ್ಟಿಯನೊಡಂಬಡೆ ತಾಳ್ದಿಯುಮಿಂತುದಾತ್ತನಾ***
***ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯ ಕೋಟಿಯಂ"***

ಈ ಪದ್ಯದಲ್ಲಿ ಪಂಪನು ಆಶ್ರಯದಾತನಾದ ಅರಿಕೇಸರಿ ರಾಜನನ್ನು, ನಾರಾಯಣನನ್ನು ಒಟ್ಟಿಗೆ ಸ್ತುತಿಸಿ ತನ್ನ ಪೋಷಕನಾದ ದೊರೆ ನಾರಾಯಣನಿಗಿಂತ ಶ್ರೇಷ್ಠನೆಂದು ಸಾರುತ್ತಾನೆ. ದೇವದಾನವರು ಸೇರಿ ಸಮುದ್ರ ಮಂಥನ ಮಾಡಿದಾಗ ಹುಟ್ಟಿ ಬಂದ ಲಕ್ಷ್ಮಿಯನ್ನು ನಾರಾಯಣನು ಏನೂ ಕಷ್ಟವಿಲ್ಲದೆ ಸ್ವೀಕರಿಸಿದನು. ವಾಮನ ರೂಪದಲ್ಲಿ ಬಲಿಚಕ್ರವರ್ತಿಯಿಂದ ನೆಲವನ್ನು ಬೇಡಿ ಪಡೆದನು. ಬರಿಯ ಪುಷ್ಪಪಟ್ಟವನ್ನು ಪಡೆದನು. ಆದರೆ ಅರಿಕೇಸರಿಯು ಶತ್ರು ಸೈನ್ಯ ಮಥನದಿಂದ ಜಯಲಕ್ಷ್ಮಿಯನ್ನು ಪಡೆದನು. ವೈರಿಗಳನ್ನು ಮೆಟ್ಟಿ ಭೂಮಿಯನ್ನು ತೆಗೆದುಕೊಂಡನು. ತನಗೆ ಮೀಸಲಾಗಿದ್ದ ಸುಪುಷ್ಪ ಪಟ್ಟವೆಂಬ ಕಿರೀಟವನ್ನು ಧರಿಸಿದನು ಎಂದು ಜೈನನಾದ ಪಂಪನು ರಾಜನನ್ನು ವಿಷ್ಣುವಿನೊಡನೆ ಭಾವಿಸುವುದು ಆತನ ಧರ್ಮ ಸಮನ್ವಯ ಭಾವವನ್ನು ಅಭಿವ್ಯಕ್ತಿಸುತ್ತದೆ.

ರತ್ನತ್ರಯರಲ್ಲಿ ಒಬ್ಬನಾಗಿರುವ ರನ್ನನೂ ಈ ಮನೋಧರ್ಮಕ್ಕೆ ಒಳಪಟ್ಟವನೆಂಬುದು ಆತನ ಕಾವ್ಯದಿಂದಲೇ ಸ್ಪಷ್ಟವಾಗುತ್ತದೆ. ಪಂಪನ ಕಾವ್ಯಮಾರ್ಗವನ್ನು ಅನುಸರಿಸಿದ ಈತನು ಧರ್ಮ ಭಾವದಲ್ಲಿಯೂ ಇದೇ ಸಮನ್ವಯತೆಯನ್ನು ಕಾಪಾಡಿಕೊಂಡವನು. ತನ್ನ ಪೋಷಕನನ್ನು ಕಾವ್ಯದ ಕಥಾನಾಯಕನೊಟ್ಟಿಗೆ ಸಮೀಕರಿಸುವುದು ಕಾವ್ಯದ ಕಥಾವಸ್ತುವಿನ ನೆಲೆಯಲ್ಲಿ ಒಂದು ಮುಖವಾದರೆ, ಕಾವ್ಯದ ಪ್ರಾರಂಭವನ್ನು ದೇವತಾ ಸ್ತುತಿಯಲ್ಲಿ ನೆರವೇರಿಸುವುದು ಮತ್ತು ತನ್ನ ರಾಜನನ್ನು ಸ್ತುತಿಸುವುದು ಕಾವ್ಯದ ಪ್ರಮುಖ ಭಾಗಗಳಲ್ಲೊಂದು ಕೂಡ. ಅದನ್ನು ರನ್ನ ಚಾಚು ತಪ್ಪದೆ ಅನುಕರಿಸಿದ್ದಾನೆ. ರಾಜನ ಇಷ್ಟ ದೈವವನ್ನು ನೆನೆಯುತ್ತಲೇ ರಾಜನ ಪರಾಕ್ರಮವನ್ನು ಬಿತ್ತರಿಸುತ್ತ ಧರ್ಮದ ನೆಲೆಯನ್ನು ಅಭಿವ್ಯಕ್ತಿಸಿದ ರನ್ನನ ಕವಿತಾಶಕ್ತಿಯು ಕಲಾ ಕೌಶಲಕ್ಕೆ ಹಿಡಿದ ಕೈಗನ್ನಡಿ.

***"ಶ್ರೀಯುವತೀಪ್ರಿಯಂ ಬಲಯುತಂ ಬಲದರ್ಪಹರಂ ಜಿತಾರಿದೈ***
***ತೇಯನನಂತಭೋಗನಿಲಯಂ ಪ್ರತಿಪಾಲಿತ ಧರ್ಮಚಕ್ರನ***
***ಬ್ಜಾವಯತನೇತ್ರನಾದಿಪುರುಷಂ ಪುರುಷೋತ್ತಮನಿ ಚಳುಕ್ಕನಾ***
***ರಾಯಣದೇವನೀಗೆಮಗೆ ಮಂಗಳ ಕಾರಣಮುತ್ಸವಂಗಳಂ"***

ಇಲ್ಲಿ ವಿಷ್ಣುವಿನ ಸ್ತುತಿಯನ್ನು ಮಾಡುತ್ತಾ ತನಗೆ ಆಶ್ರಯದಾತನಾದ ಇರಿವಬೆಡಂಗ ಸತ್ಯಾಶ್ರಯನನ್ನು ಸ್ಮರಿಸುವ ಪರಿಯನ್ನು ಗಮನಿಸಬೇಕು. ಬಳೆಗಾರ ಕುಲದ ಜೈನಮತಾನುಯಾಯಿಯಾದ ರನ್ನ ಹಾಗೂ

ವೈದಿಕನಾದ ರಾಜನ ನಡುವಿದ್ದ ಅಪಾರ ಪ್ರೀತಿ, ಗೌರವ, ವಿಶ್ವಾಸವೆಲ್ಲವೂ ಕಾವ್ಯದಲ್ಲಿಯೇ ಬಿತ್ತರವಾಗಿದೆ. ಸತ್ಯಾಶ್ರಯ ರಾಜನನ್ನು ಚಾಲುಕ್ಯ ನಾರಾಯಣ ದೇವನೆಂದು ಸಂಬೋಧಿಸುತ್ತಾ ನಮಗೆ ಸುಖ ಸಂತೋಷವನ್ನು ಉಂಟುಮಾಡಲೆಂದು ಕೇಳಿಕೊಳ್ಳುವ ಪರಿ ಧಾರ್ಮಿಕ ಚೌಕಟ್ಟನ್ನು ಮೀರಿ ನಿಲ್ಲುವಂಥದ್ದು. ಇಂಥ ಧಾರ್ಮಿಕ ಸಾಂಗತ್ಯ ನೆರವೇರಲು ವಿಶಾಲ ಮನೋಧರ್ಮ ಅತ್ಯಗತ್ಯ. ಧರ್ಮದ ಬಗೆಗಿನ ಅಂಧತ್ವವಿಲ್ಲದಿದ್ದರೆ ಮಾತ್ರ ಈ ಭಾವಬಂಧುರತೆಸಾಧ್ಯವೆಂಬುದನ್ನು ಮನಗಾಣಬೇಕು.

ಹೀಗೆ ಕನ್ನಡ ಕವಿಗಳ ಕಾವ್ಯಗಳು ಧರ್ಮ ಸಮನ್ವಯವನ್ನು ಸ್ಥಾಪಿಸುವ ಮೂಲಕ ಸಮಾಜದಲ್ಲಿ ಸರ್ವರಿಗೂ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ, ಯೋಚಿಸುವ ಮನೋಭಾವ ಸಂಸ್ಕೃತಿಯ ಒಂದು ಭಾಗವೆಂದು ಸಾರಿತು. ಅದನ್ನು ವಿವೇಕದಿಂದ ಸಹನೀಯಗೊಳಿಸಿಕೊಳ್ಳುವ ಗುಣಧರ್ಮವನ್ನು ಪಾಲಿಸಬೇಕಾಗಿದೆ; ಅದಕ್ಕೆ ಮನಸ್ಸು ಉದಾತ್ತಗೊಳ್ಳಬೇಕಾಗಿದೆ. ಕನ್ನಡ ನಾಡು ಈ ಆಶಯವನ್ನೆ ಸಾಹಿತ್ಯದ ಮೂಲಕ ಕಾಣಬಯಸಿತು. ಹೀಗೆ ಸಾಗಿದರೆ ಮಾನವ ಸಮಾಜಕ್ಕೆ ಶೋಭೆಯೆಂಬ ಪಾತ ಬದುಕಿನ ಪಾತವಾಗಬೇಕು. ಅದಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟಿದ್ದು ಪ್ರಾಚೀನ ಕನ್ನಡ ಕಾವ್ಯಗಳು ಮತ್ತು ಕವಿಗಳು. ಅವರ ಮನೋಧರ್ಮ ಒಳಿತನ್ನು ಬಯಸಿ ನಡೆದದ್ದು. ಅದರ ತಳಹದಿಯಲ್ಲಿ ಸಾಗಿದರೆ ಸಮಾಜದಲ್ಲಿ ಧರ್ಮಗಳ ಬಗೆಗಿನ ಕಣ್ಕಟ್ಟುಗಳು ತೆರೆದು, ಸಂಕುಚಿತ ಭಾವಗಳು ಒಡೆದು, ಸಮಾಜಮುಖಿ ನೆಲೆಯಲ್ಲಿ ಮನುಷ್ಯ ನಿಲ್ಲಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅನಂತರಂಗಾಚಾರ್, ಎನ್. (2016). *ಪಂಪ ಮಹಾಕವಿ ವಿರಚಿತ ಪಂಪ ಭಾರತಂ.* ಕನ್ನಡ ಸಾಹಿತ್ಯ ಪರಿಷತ್ತು.
- ನರಸಿಂಹಮೂರ್ತಿ, ಎ.ವಿ. *ಕರ್ನಾಟಕ ಶಾಸನ ಸಂಪತ್ತು.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
- ಸೀತಾರಾಮಯ್ಯ, ಎಂ.ವಿ. *ಶ್ರೀವಿಜಯಕೃತ ಕವಿರಾಜಮಾರ್ಗಂ.* ಕನ್ನಡ ಸಾಹಿತ್ಯ ಪರಿಷತ್ತು
- ತೀ.ನಂ.ಶ್ರೀ. *ರನ್ನನ ಗದಾಯುದ್ಧ ಸಂಗ್ರಹಂ.* ಕಾವ್ಯಾಲಯ ಪ್ರಕಾಶನ
- ವೀರಣ್ಣ, ಸಿ. (2025). *ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ.* ನವಕರ್ನಾಟಕ ಪ್ರಕಾಶನ.